ದಿ.18.08.2021ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣಬೋಧಿಸಲಾಯ್ತು.

**<u>ಮುಂದುವರಿದ ಪಾಟೀ ಸವಾಲುಃ ಆರೋಪಿ-4, 15 ರಿಂದ 19ರವರ ಪರ ಶ್ರೀ ಟಿಎಸ್ ವಕೀಲರಿಂದಃ</u>**

ನನ್ನ ತಾಯಿಗೆ ವೆಂಕಟರಾಯಪ್ಪ ಅನ್ನುವ ಸಹೋದರ ಇರುವುದಿಲ್ಲ. ನನ್ನ ತಾಯಿ ಹಾಗೂ ಆಕೆಯ ಸಹೋದರ ವೆಂಕಟರಾಯಪ್ಪರವರ ಮಧ್ಯದಲ್ಲಿ ಜಮೀನು ಪಾಲು ಆಗಿತ್ತು ಅಂದರೆ ಸರಿಯಲ್ಲ. ದ್ಯಾವರಹಳ್ಳಿಯ ಸರ್ವೆ ನಂಬರ್ 1ರಲ್ಲಿ ಒಂದು ಎಕರೆ ಮೂರು ಗುಂಟೆಯನ್ನು 6ನೇ ಆರೋಪಿ ವೆಂಕಟರಾಯಪ್ಪನವರಿಂದ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಶಾಂತಕುಮಾರನು ಖರೀದಿ ಮಾಡಿದ್ದ ಕುರಿತಂತೆ ಖಾತೆ ಮಾಡಿಸಲು ತಹಶೀಲ್ದಾರ್‌ರವರ ಮುಂದೆ ಅರ್ಜಿ ಹಾಕಿದ್ದರು ಎಂದರೆ ಅದಕ್ಕೂ ನನಗೂ ಸಂಬಂಧ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಅರ್ಜಿಗೆ ನನ್ನ ತಾಯಿ ತಕರಾರು ಸಲ್ಲಿಸಿದ್ದರಿಂದ ಆರ್‌ಆರ್‌ಟಿ ನಂ.28/2010-11ರಡಿಯಲ್ಲಿ ನಡೆದು 6ನೇ ಆರೋಪಿಯಂತೆ ಪ್ರಕರಣ ನಿಖಾಲಿಯಾಗಿದೆ ಎಂದರೆ ಸುಳ್ಳು. ಸದರಿ ಆದೇಶದ ವಿರುದ್ದ ನನ್ನ ತಾಯಿ ಎಸಿ ನ್ಯಾಯಾಲಯದಲ್ಲಿ ಆರ್ ಎ 97/2010-11ರಲ್ಲಿ ಅರ್ಜಿ ಸಲ್ಲಿಸಿದ್ದರು. ಸದರಿ ಅಪೀಲು ವಜಾ ಆಗಿತ್ತು ಎಂದರೆ ಗೊತ್ತಿಲ್ಲ.

ಸದರಿ ಅಪೀಲಿನ ಆದೇಶದ ವಿರುದ್ದ ಡಿಸಿ ನ್ಯಾಯಾಲಯದಲ್ಲಿ ಆರ್‌ಪಿ 45/2012-13 ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಆರ್‌ಪಿ ಕೂಡ ವಜಾ ಆಗಿತ್ತು ಎಂದರೆ ಗೊತ್ತಿಲ್ಲ. ಸದರಿ ಆರ್‌ಪಿ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನ್ನ ತಾಯಿ ಡಬ್ಲ್ಯೂಪಿ

ದಾಖಲಿಸಿದ್ದರು ಸದರಿ ಪ್ರಕರಣ ಚಾಲ್ತಿಯಲ್ಲಿದ್ದಾಗ ನನ್ನ ತಾಯಿ ತೀರಿಕೊಂಡಿದ್ದರಿಂದ, ಪ್ರಕರಣದಲ್ಲಿ ಯಾರೂ ಇಲ್ಲ ಎಂದೂ ವಜಾ ಆಗಿತ್ತು ಎಂದರೆ ಗೊತ್ತಿಲ್ಲ.

ದ್ಯಾವರಹಳ್ಳಿಯ ಸರ್ವೆ ನಂಬರ್ 49/1ರ ಪೈಕಿ 20 ಗುಂಟೆ ಜಮೀನನ್ನು ಭಾರತಿ ಅನ್ನುವವರು ನನ್ನಿಂದ, ನನ್ನ ಸಹೋದರಿ ಗೌರಮ್ಮ ಹಾಗೂ ಸಹೋದರ ನಾರಾಯಣಸ್ವಾಮಿರವರಿಂದ ದಿ:21.09.2014ರಂದು ಖರೀದಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಭಾರತಿಯವರಿಂದ 6ನೇ ಆರೋಪಿ ದಿ:05.08.2019ರಂದು ಸದರಿ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ.

ಸದರಿ ಆಸ್ತಿಯಲ್ಲಿ ತನಗೆ ಪಾಲು ಬರಬೇಕೆಂದು ನನ್ನ ಮಗ ಗುರುರಾಜ ನನ್ನ, ನನ್ನ ಸಹೋದರಿ ಗುರಮ್ಮ ಹಾಗೂ ಸಹೋದರ ನಾರಾಯಣಸ್ವಾಮಿ, ಭಾರತಿ ಹಾಗೂ 6ನೇ ಆರೋಪಿ ವಿರುದ್ದ ದೇವನಹಳ್ಳಿಯ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ಅಸಲುದಾವಾ ನಂ.765/2019 ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯನ್ನು ನನ್ನ ಮಗನ ಕಡೆಯಿಂದ ನಾನೇ ಸದರಿ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ತಿಂಡ್ಲು ಗ್ರಾಮದ ಸರ್ವೆ ನಂಬರ್ 112/5ರ 1 ಎಕರೆ 16 ಗುಂಟೆ ಜಮೀನನ್ನು 6ನೇ ಆರೋಪಿ ನಯನಮ್ಮರವರಿಂದ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಖರೀದಿಗೆ ಖಾತೆ ಬದಲಾಯಿಸಲು ಅರ್ಜಿ ಹಾಕಿದ್ದಕ್ಕೆ ನನ್ನ ತಾಯಿ ತಕರಾರು ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ಅರ್ಜಿಯು ಆರ್‌ಆರ್‌ಟಿಸಿಆರ್ ನಂ.52/2015-16ರಲ್ಲಿ ನಡೆದು 6ನೇ ಆರೋಪಿಯ ಪರವಾಗಿ ಆದೇಶವಾಗಿದೆ ಎಂದರೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ದ ನನ್ನ ತಾಯಿ ದೇವನಹಳ್ಳಿಯ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ದಾವೆ ನಂ.580/2015ರಲ್ಲಿ ದಾಖಲಿಸಿದ್ದರು

ಎಂದರೆ ಗೊತ್ತಿಲ್ಲ. ದ್ಯಾವರಹಳ್ಳಿಯ ಸರ್ವೆ ನಂಬರ್ 64ನ್ನು 7ನೇ ಆರೋಪಿ 15ನೇ ಆರೋಪಿಯ ಪರವಾಗಿ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಖರೀದಿಗೆ ಶಿವಕುಮಾರ್ ಎನ್ನುವವರು ಆರ್‌ಆರ್‌ಟಿಸಿಆರ್ ನಂ.6/2021ರಲ್ಲಿ ತಕರಾರು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಕೂಡ ಪಕ್ಷಗಾರನಾಗಬೇಕು ಎಂದು ಅರ್ಜಿ ಸಲ್ಲಿಸಿದ್ದೆನು ಎಂದರೆ ಗೊತ್ತಿಲ್ಲ. ಸದರಿ ಪ್ರಕರಣವು ವೆಂಕಟಪ್ಪನ ಪರವಾಗಿ ಆದೇಶವಾಗಿತ್ತು ಎಂದರೆ ಗೊತ್ತಿಲ್ಲ.

ಮೇಲೆ ಹೇಳಿದ ಪ್ರಕರಣಗಳು ಆಗಿದ್ದರಿಂದ 6, 15 ಮತ್ತು 16ನೇ ಆರೋಪಿಗಳ ಮೇಲೆ ನಮಗೆ ದ್ವೇಷ ಇದೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ಇದ್ದ ಆಸ್ತಿಯ ಮೇಲೆ 4, 5, 17ರಿಂದ 19ರವರಿಗೂ ಆಸಕ್ತಿ ಇದ್ದುದರಿಂದ ಅವರ ಮೇಲೆಯೂ ಕೂಡ ನನಗೆ ದ್ವೇಷ ಇದೆ ಎಂದರೆ ಸರಿಯಲ್ಲ.

4ರಿಂದ 6ನೇ ಆರೋಪಿಗಳು, 15ರಿಂದ 19ನೇ ಆರೋಪಿಗಳು ದ್ಯಾವರಹಳ್ಳಿಯ ವಾಸಿಗಳು ಎಂದರೆ ಸರಿ. 1, 9 ಮತ್ತು 12ನೇ ಆರೋಪಿಗಳು ಪಂಡಿತಪುರದ ವಾಸಿಗಳು. 2, 8 ಮತ್ತು 10ನೇ ಆರೋಪಿಗಳು ಬೊಮ್ಮಾವಾರದ ವಾಸಿಗಳು. 7ನೇ ಆರೋಪಿ ಬೈರದೇವನಹಳ್ಳಿ ಗ್ರಾಮದವರು. 11ನೇ ಆರೋಪಿ ಸೂರಗುಂಡೆ ಗ್ರಾಮದ ವಾಸಿ. 3, 13 ಮತ್ತು 14ನೇ ಆರೋಪಿಗಳು ಚಾಕಲೇಟ್ ಬಾಗಲೂರು ಗ್ರಾಮದವರು.

ಪಂಡಿತಪುರದಿಂದ ನಮ್ಮ ಊರಿಗೆ ಒಂದು ಕಿಮೀ ಅಂತರದಲ್ಲಿದೆ. ಬೊಮ್ಮಾವರ ಎಂಟು ಕಿಮೀ ಅಂತರ ಇದೆ. ಪಂಡಿತಪುರದಿಂದ ಬೊಮ್ಮಾವರಕ್ಕೆ 12 ಕಿಮೀ ಅಂತರ ಇದೆ. ಬೈರದೇವನಹಳ್ಳಿ ನಮ್ಮ ಊರಿನಿಂದ 3ಕಿಮೀ ಅಂತರ ಇದೆ. ಪಂಡಿತಪುರದಿಂದ ಬೈರದೇವನಹಳ್ಳಿಗೆ 4ಕಿಮೀ ಅಂತರ ಇದೆ. ಪಂಡಿತಪುರದಿಂದ ಸೂರಗುಂಡೆ ಗ್ರಾಮ 2 ಕಿಮೀ

ಅಂತರ ಇದೆ. ಚಾಕಲೇಟ್ ಬಾಗಲೂರು ನಮ್ಮ ಊರಿನಿಂದ 15ಕಿಮೀ ಅಂತರದಲ್ಲಿದೆ. ಬಾಗಲೂರಿನಿಂದ ಪಂಡಿತಪುರಕ್ಕೆ 17 ಕಿಮೀ ಅಂತರ ಇದೆ.

ಘಟನೆಗಿಂತ ಮೊದಲು 1ರಿಂದ 3, 7, 8, 9, 10, 11, 12, 13 ಮತ್ತು 14ನೇ ಆರೋಪಿಗಳು ನಮ್ಮ ಊರಿಗೆ ಆಗಾಗ್ಗೆ ಬಂದು ಹೋಗುತ್ತಿದ್ದರು ಸಾಕ್ಷಿ ಮುಂದುವರಿದು 6ನೇ ಆರೋಪಿಯ ಮನೆಗೆ ಬಂದು ಹೋಗುತ್ತಿದ್ದರು ಎಂದು ನುಡಿದಿರುತ್ತಾರೆ. ಆಗ ಅವರ ಹೆಸರುಗಳು ನನಗೆ ಗೊತ್ತಿತ್ತು, ಪೋಲಿಸರ ಮುಂದೆ ನಾನು ಹೇಳಿಕೆ ನೀಡುವಾಗ ಮೇಲೆ ಹೇಳಿದ ಆರೋಪಿತರ ಹೆಸರು ಗೊತ್ತಿತ್ತು ಎಂದು ಹೇಳಿಕೆ ನೀಡಿದ್ದೆ.

6, 15 ಮತ್ತು 16ನೇ ಆರೋಪಿಗಳು ಒಂದೇ ಮನೆಯಲ್ಲಿ ವಾಸವಾಗಿರುತ್ತಿದ್ದರು ಎಂದರೆ ಸರಿ. ಅವರುಗಳು ತಮ್ಮ ಹೆಂಡತಿ ತಂದೆ ತಾಯಿ ಮತ್ತು ಮಕ್ಕಳೊಂದಿಗೆ ವಾಸವಾಗಿದ್ದರು ಎಂದರೆ ಗೊತ್ತಿಲ್ಲ. ಸದರಿ ಆರೋಪಿತರ ಮನೆಗೂ ನಮ್ಮ ಮನೆಗೂ ಸುಮಾರು 50 ಅಡಿ ಅಂತರ ಇದೆ ಎಂದರೆ ದೂರ ಇದೆ ಅಂತರ ಹೇಳಲು ಬರುವುದಿಲ್ಲ. ಸದರಿ ಆರೋಪಿಗಳ ಮದುವೆ ಆಗಿದ್ದ ಬಗ್ಗೆ ಗೊತ್ತಿಲ್ಲ. ಅವರಿಗೆ ಎರಡು ಕಾರ್, ಎರಡು ಬೈಕ್‌ಗಳು ಇದ್ದವು. ಅವರ ತಂದೆ ತಾಯಿಗಳು ಜೊತೆಗೆ ಇದ್ದರೋ ಇಲ್ಲವೊ ಎಂದರೆ ಇದ್ದಿರಬಹುದು.

4ನೇ ಆರೋಪಿ ನಮ್ಮ ಮನೆಯ ಪಕ್ಕದಲ್ಲಿ ಅಂಗಡಿ ಇಟ್ಟುಕೊಂಡಿದ್ದನು ಎಂದರೆ ದೂರದಲ್ಲಿ ಇದೆ ಆದರೆ ನಮ್ಮ ಮನೆಗೆ ಅವರ ಅಂಗಡಿ ಕಾಣಿಸುತ್ತದೆ. 4ನೇ ಆರೋಪಿ ಹಾಗೂ ಅವರ ಅಣ್ಣ ಒಟ್ಟಿಗೆ ಇರುತ್ತಿದ್ದರು ಎಂದರೆ ಗೊತ್ತಿಲ್ಲ. 4, 5, 17ರಿಂದ 19ನೇ ಆರೋಪಿಗಳ ಮನೆ ನಮ್ಮ ಮನೆಯ ಸಮೀಪ ಇದೆ ಎಂದರೆ ದೂರ ಇವೆ ಆದರೆ ಕಾಣಿಸುತ್ತವೆ.

ನಮ್ಮ ಮನೆಯಲ್ಲಿ ನಾನು, ನನ್ನ ಪತ್ನಿ, ನನ್ನ ತಂದೆ ತಾಯಿ, ನನ್ನ ಮಗ ಗುರುರಾಜ, ನನ್ನ ತಮ್ಮ ನಾರಾಯಣಸ್ವಾಮಿ ಪ್ರಾಸಾ-4 ವಾಸವಾಗಿದ್ದೇವೆ. ಪ್ರಾಸಾ-4ರವರಿಗೆ ಘಟನೆ ಸಮಯದಲ್ಲಿ ಕಾರ್ ಇತ್ತು ಅದರ ಮಾಡೆಲ್ ಗೊತ್ತಿಲ್ಲ.

ಮೃತ ದೊಡ್ಡಚಿನ್ನಪ್ಪನವರ ಮನೆಯಲ್ಲಿ ದೇವರಾಜ, ನಾರಾಯಣಮ್ಮ, ಮಂಜುನಾಥ, ವೆಂಕಮ್ಮ, ವೆಂಕಟಪ್ಪ ವಾಸವಾಗಿದ್ದರು. ವೆಂಕಟಪ್ಪ ವಿವಾಹಿತರು. ಅವರ ಮನೆ ಹಾಗೂ ನಮ್ಮ ಮನೆ ಸಮೀಪದಲ್ಲಿದೆ ಎಷ್ಟು ಸಮೀಪ ಎಂದು ಕೇಳಿದಾಗ ನ್ಯಾಯಾಲಯದ ಎದಿರು ಗೋಡೆ ತೋರಿಸಿ ಅಷ್ಟು ದೂರ ಆಗುತ್ತದೆ ಎಂದು ಹೇಳಿರುತ್ತಾರೆ.

ಪ್ರಾಸಾ-1ರವರು ಬೇರೆ ಕಡೆ ವಾಸವಾಗಿದ್ದರು. ಅವರ ಮನೆ ಊರಿನ ಶಾಲೆಯ ಪಕ್ಕದಲ್ಲಿದೆ. 2010ಕ್ಕಿಂತಲೂ 5 ವರ್ಷಕ್ಕಿಂತ ಮುಂಚೆಯಿಂದಲೂ ಬೇರೆಯಾಗಿ ವಾಸ ಮಾಡುತ್ತಿದ್ದರು.

1ನೇ ಆರೋಪಿ ಇಟ್ಟಿಗೆಯನ್ನು ಘಟನೆಯ ಒಂದು ವಾರದ ಮುಂಚೆ ಕೊಟ್ಟಿದ್ದರು. ಅದಕ್ಕಿಂತ ಮುಂಚೆ ಇಟ್ಟಿಗೆಯನ್ನು ಕೊಟ್ಟಿರಲಿಲ್ಲ, ಎರಡು ಟ್ರಾಕ್ಟರ್ ಲೋಡ್ ಇಟ್ಟಿಗೆಯನ್ನು ಕೊಟ್ಟಿದ್ದರು. ಅದರ ಬೆಲೆ ಗೊತ್ತಿಲ್ಲ, ಸದರಿ ಇಟ್ಟಿಗೆ ಆಗಿನಿಂದಲೂ ಹಾಗೆಯೇ ಮನೆ ಮುಂದೆ ಇವೆ. ಇಟ್ಟಿಗೆ ಹಣಕ್ಕಾಗಿ ಮೊದಲ ಸಾರಿ ಶಿವರಾತ್ರಿಯಂದು 1ನೇ ಆರೋಪಿ ಬಂದಿದ್ದರು.

ಮೃತರಲ್ಲಿ ಮೊದಲು ಗಾಯತ್ರಿಮ್ಮರವರಿಗೆ ಏಟು ಬಿದ್ದಿತ್ತು, ನಂತರ ದೊಡ್ಡಚಿನ್ನಪ್ಪನಿಗೆ ತದನಂತರ ದೇವರಾಜನಿಗೆ ಏಟು ಬಿದ್ದಿತ್ತು, ಗಾಯಾಳುಗಳಲ್ಲಿ ಮೊದಲು ಮುನಿಕೃಷ್ಣಪ್ಪನಿಗೆ, ನಂತರ ನನಗೆ, ತದನಂತರ ಮಂಜುನಾಥನಿಗೆ ಏಟು ಬಿದ್ದಿತ್ತು,

ಒಂದೊಂದು ಬೈಕ್ ನಲ್ಲಿ ಇಬ್ಬಿಬ್ಬರು ಆರೋಪಿಗಳು ಬಂದಿದ್ದರು ಒಟ್ಟು 19 ಜನ ಆರೋಪಿಗಳು ನಾಲ್ಕು ಬೈಕ್ ಎರಡು ಕಾರಿನಲ್ಲಿ ಬಂದಿದ್ದರು. ಸಾಕ್ಷಿ ಮುಂದುವರಿದು ಒಂದೊಂದು ಬೈಕ್‌ನಲ್ಲಿ ಒಬ್ಬೊಬ್ಬರು ಬಂದಿದ್ದರು. ಬೈಕ್ ನಲ್ಲಿ 10ನೇ ಆರೋಪಿ, 7ನೇ ಆರೋಪಿ, 2ನೇ ಆರೋಪಿ, 14ನೇ ಆರೋಪಿ ಬಂದಿದ್ದರು.

ನಾನು, ಮುನಿಕೃಷ್ಣಪ್ಪ ಹಾಗೂ ಮಂಜುನಾಥ ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿ ಡಿಸ್ಚಾರ್ಜ್ ಆಗಿದ್ದೆವು. ಘಟನೆಯಾಗಿ 4ನೇ ದಿನಕ್ಕೆ ನಾನು ಹೇಳಿಕೆ ನೀಡಿದ್ದೆ. ನಾಲ್ಕು ಬೈಕ್ ಮತ್ತು ಎರಡು ಕಾರ್‌ನಲ್ಲಿ ಒಟ್ಟು 19 ಜನ ಚೂರಿ, ಚಾಕು, ಲಾಂಗ್, ದೊಣ್ಣೆಗಳೊಂದಿಗೆ ಆರೋಪಿಗಳು ಸ್ಥಳಕ್ಕೆ ಬಂದಿದ್ದರು ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಎರಡು ಕಾರಿನಲ್ಲಿ ಜನರು ಬಂದಿದ್ದರು ಎಂದು ಪೋಲಿಸರ ಬಳಿ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಪತ್ನಿ ಗಾಯತ್ರಮ್ಮನಿಗೆ ಚೂರಿಯಿಂದ ಎರಡು ಏಟು ಬಿದ್ದಿತ್ತು, ಎಡಗಡೆ ಮತ್ತು ಬಲಗಡೆ ಚೂರಿ ಹಾಕಿದ್ದರು. ತಿಮ್ಮಯ್ಯ ಚೂರಿ ಹಾಕಿದ್ದನು. ಎರಡು ಏಟನ್ನೂ ಒಬ್ಬರೇ ಹಾಕಿದ್ದರು ಎಂದರೆ ಸರಿ. ದೊಣ್ಣೆಯಿಂದ 4-5 ಜನರು ಹೊಡೆದಿದ್ದರು ಒಬ್ಬೊಬ್ಬರು 2-3 ಸಾರಿ ಹೊಡೆದಿರಬಹುದು. ಕಾಲುಗಳಿಗೆ, ತಲೆಗಳಿಗೆ, ಬೆರಳುಗಳಿಗೆ ಹೊಡೆದಿದ್ದರು. 9ನೇ ಆರೋಪಿ ಕುಮಾರ ದೊಣ್ಣೆಯಿಂದ ಎರಡು ಸಾರಿ ಹೊಡೆದಿದ್ದನು. ತಲೆಗೆ, ಕಾಲಿಗೆ, ಕೈಗಳಿಗೆ ದೊಣ್ಣೆಯಿಂದ ಹೊಡೆದಿದ್ದರಿಂದ ಗಾಯಗಳಾಗಿತ್ತು.

ಮೃತ 8ನೇ ಆರೋಪಿ, 17ನೇ ಆರೋಪಿ, 5ನೇ ಆರೋಪಿ, 18ನೇ ಆರೋಪಿ, 19ನೇ ಆರೋಪಿಗಳು ನನ್ನ ಪತ್ನಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ್ದರು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಮೃತ 8ನೇ ಆರೋಪಿ, 17ನೇ ಆರೋಪಿ, 5ನೇ ಆರೋಪಿ, 18ನೇ ಆರೋಪಿ, 19ನೇ ಆರೋಪಿಗಳು ನನ್ನ ಪತ್ನಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 6, 15ರಿಂದ 19ನೇ ಆರೋಪಿಗಳು ಘಟನೆ ಸ್ಥಳಕ್ಕೆ ಬಂದಿರುವುದಾಗಲೀ ಅಥವಾ ಘಟನೆಯಲ್ಲಿ ಭಾಗವಹಿಸಿದ್ದರು ಎಂದು ಪೋಲಿಸರ ಬಳಿ ನೀಡಿದ್ದ ಹೇಳಿಕೆಯಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ.

15ನೇ ಆರೋಪಿ ಬಿದ್ದು ಹೋಗಿದ್ದ ಚೂರಿಯನ್ನು ದೊಡ್ಡಚಿನ್ನಪ್ಪನ ಹೊಟ್ಟೆಗೆ ತಿವಿದಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ. 6ನೇ ಆರೋಪಿ ಲಾಂಗ್‌ನಿಂದ ದೊಡ್ಡಚಿನ್ನಪ್ಪನಿಗೆ ಹೊಟ್ಟೆಗೆ ಹಲ್ಲೆ ಮಾಡಿದ್ದರು ಆತನ ಕರುಳು ಹೊರಬಂದಿತ್ತು ಎಂದು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂದರೆ ಸರಿಯಲ್ಲ. 15ನೇ ಆರೋಪಿ ಬಿದ್ದು ಹೋಗಿದ್ದ ಚೂರಿಯನ್ನು ದೊಡ್ಡಚಿನ್ನಪ್ಪನ ಹೊಟ್ಟೆಗೆ ತಿವಿದಿದ್ದರು, 6ನೇ ಆರೋಪಿ ಲಾಂಗ್‌ನಿಂದ ದೊಡ್ಡಚಿನ್ನಪ್ಪನಿಗೆ ಹೊಟ್ಟೆಗೆ ಹಲ್ಲೆ ಮಾಡಿದ್ದರು ಆತನ ಕರುಳು ಹೊರಬಂದಿತ್ತು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಗಲಾಟೆ ಬಿಡಿಸಲು ಬಂದ ಮೃತ ದೇವರಾಜುರವರಿಗೆ 16ನೇ ಆರೋಪಿ ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದರು ಮತ್ತು ಮೃತ ದೇವರಾಜುವಿಗೆ 16ನೇ ಆರೋಪಿ ಆತನ ಗುಪ್ತಾಂಗಕ್ಕೆ ಒದ್ದಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಹೇಳಿರಲಿಲ್ಲ ಎಂರೆ ಸರಿಯಲ್ಲ. ಗಲಾಟೆ ಬಿಡಿಸಲು ಬಂದ ಮೃತ ದೇವರಾಜುರವರಿಗೆ 16ನೇ ಆರೋಪಿ ಚಾಕುವಿನಿಂದ ಹೊಟ್ಟೆಗೆ

ತಿವಿದಿದ್ದರು ಮತ್ತು ಮೃತ ದೇವರಾಜುವಿಗೆ 16ನೇ ಆರೋಪಿ ಆತನ ಗುಪ್ತಾಂಗಕ್ಕೆ ಒದ್ದಿದ್ದರು ಎಂದು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹೇಳಿಕೆಯಲ್ಲಿ, ನನ್ನ ಸಹಾಯಕ್ಕೆ ಬಂದ ದೇವರಾಜನಿಗೆ ಬಂದಿದ್ದ ಆಸಾಮಿಗಳಲ್ಲಿ ಕೆಂಪಗಿದ್ದ ಒಬ್ಬ ವ್ಯಕ್ತಿ ಅವನ ಕೈಯಲ್ಲಿದ್ದ ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದರಿಂದ ದೇವರಾಜು ಕೆಳಕ್ಕೆ ಬಿದ್ದ, ಅಷ್ಟರಲ್ಲಿ ಅವನೇ ತನ್ನ ಕಾಲಿನಿಂದ ಬಲವಾಗಿ ದೇವರಾಜುವಿನ ತರಡು ಬೀಜಕ್ಕೆ ಒದ್ದಾಗ ದೇವರಾಜು ಅಯ್ಯೋ ಅಯ್ಯೋ ಎಂದು ಒದ್ದಾಡುತ್ತಿದ್ದ ಎಂದು ಪೋಲಿಸರಿಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. 16ನೇ ಆರೋಪಿಯು ಮೃತ ದೇವರಾಜನಿ ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದರಿಂದ ದೇವರಾಜು ಕೆಳಕ್ಕೆ ಬಿದ್ದ, ಅಷ್ಟರಲ್ಲಿ ಅವನೇ ತನ್ನ ಕಾಲಿನಿಂದ ಬಲವಾಗಿ ದೇವರಾಜುವಿನ ತರಡು ಬೀಜಕ್ಕೆ ಒದ್ದಿದ್ದನು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದೇವರಾಜುವಿಗೆ ಚಾಕುವಿನಿಂದ ಒಂದು ಏಟು ಹೊಟ್ಟೆಗೆ ಬಿದ್ದಿತ್ತು. ದೊಡ್ಡಚಿನ್ನಪ್ಪನಿಗೆ ಚಾಕುವಿನಿಂದ ಎರಡು ಏಟು ಬಿದ್ದಿತ್ತು. ಲಾಂಗ್‌ನಿಂದ ಒಂದು ಏಟು ಬಿದ್ದಿತ್ತು. ಚಾಕುವಿನಿಂದ ಒಂದು ಹೊಟ್ಟೆಗೆ ಒಂದು ಸೊಂಟಕ್ಕೆ ಏಟು ಬಿದ್ದಿತ್ತು.

19ನೇ ಆರೋಪಿ ಮುನಿರಾಜ ಚಾಕುವಿನಿಂದ ಚಾಸಾ-1ರವರಿಗೆ ತಿವಿದಿದ್ದರು ಎಂದು ಪೋಲಿಸರ ಬಳಿ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. 19ನೇ ಆರೋಪಿ ಮುನಿರಾಜ ಚಾಕುವಿನಿಂದ ಚಾಸಾ-1ರವರಿಗೆ ತಿವಿದಿದ್ದರು ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1ರವರಿಗೆ ಎರಡು ಕಡೆ ಏಟು ಬಿದ್ದಿತ್ತು. ಎರಡು ಚಾಕು ಏಟು ಬಿದ್ದಿತ್ತು ಒಂದು ದೊಣ್ಣೆ ಬಿದ್ದಿತ್ತು ಒಂದು ಎಡಗಡೆ ಮತ್ತು ಒಂದು ಬಲಗಡೆಗೆ ಚಾಕುವಿನಿಂದ ಏಟು ಬಿದ್ದಿತ್ತು. ದೊಣ್ಣೆಯಿಂದ 4-5 ಗಾಯಗಳು ಆಗಿದ್ದವು.

18ನೇ ಆರೋಪಿ ನಾರಾಯಣಸ್ವಾಮಿ ದೊಣ್ಣೆಯಿಂದ ನನ್ನ ಕೈಗಳಿಗೆ ಹಲ್ಲೆ ಮಾಡಿದ್ದರು ಎಂದು ಪೋಲಿಸರ ಬಳಿ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಚಾಕುವಿನಿಂದ ಒಂದು ದೊಡ್ಡ ಏಟು ಬಿದ್ದಿತ್ತು, ದೊಣ್ಣೆಯಿಂದ ಮೂರು ಜನರು ಹೊಡೆದಿದ್ದರು. ಸುರೇಶ, ಚೇತನ, ವೇಣುಗೋಪಾಲ, ನಾರಾಯಣಸ್ವಾಮಿ, 11ರಿಂದ 14ನೇ ಆರೋಪಿಗಳು ವಡ್ಡ ಜಾತಿಯವರನ್ನು ಹೊಡೆಯಿರಿ ಎಂದು ಕುಮ್ಮಕ್ಕು ನೀಡುತ್ತಿದ್ದರು ಎಂದು ಪೋಲಿಸರ ಬಳಿ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. 18ನೇ ಆರೋಪಿ ನಾರಾಯಣಸ್ವಾಮಿ ದೊಣ್ಣೆಯಿಂದ ನನ್ನ ಕೈಗಳಿಗೆ ಹಲ್ಲೆ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುರೇಶ, ಚೇತನ, ವೇಣುಗೋಪಾಲ, ನಾರಾಯಣಸ್ವಾಮಿ, 11ರಿಂದ 14ನೇ ಆರೋಪಿಗಳು ವಡ್ಡ ಜಾತಿಯವರನ್ನು ಹೊಡೆಯಿರಿ ಎಂದು ಕುಮ್ಮಕ್ಕು ನೀಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4ನೇ ಆರೋಪಿ ಚಾಕುವಿನಿಂದ ಚಾಸಾ-3ರವರ ಸೊಂಟಕ್ಕೆ ತಿವಿದಿದ್ದರು ಎಂದು ಪೋಲಿಸರ ಬಳಿ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಹಳೆಯ ದ್ವೇಷದಿಂದ 4 ಮತ್ತು 5ನೇ ಆರೋಪಿತರ ಮೇಲೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. 6, 15ರಿಂದ 19ನೇ ಆರೋಪಿಗಳ ಮೇಲೆ ಪ್ರಾಸಾ-4ರವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

5 ಮತ್ತು 6ನೇ ಆರೋಪಿಗಳ ಪರ ಶ್ರೀ ಎಸ್‌ಎಸ್‌ಜೆ ವಕೀಲರು, 1 ಮತ್ತು 12ನೇ ಆರೋಪಿಗಳ ಪರ ಶ್ರೀ ಎಂಆರ್ ವಕೀಲರು, 2ನೇ ಆರೋಪಿ ಶ್ರೀ ಕೆವಿನ್‌ಆರ್ ವಕೀಲರು, 16ನೇ ಆರೋಪಿ ಪರ ಶ್ರೀ ಕೆವಿಕೆ ವಕೀಲರು, ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ನ್ಯಾಯಾಲಯದ ಅವಧಿ 05.15 ಆಗಿದ್ದು ಇನ್ನೂ ಪ್ರಕರಣಗಳು ಬಾಕಿ ಇರುವುದರಿಂದ ಪಾಟೀ ಸವಾಲಿಗಾಗಿ ವಿನಂತಿಯ ಮೇರೆಗೆ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.